<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 315 |
| 2. | ಪ್ರಶ್ನೆ ಕೇಳಿದ ಸದಸ್ಯರು | ಶ್ರೀ. ಮಂಜುನಾಥ್ ಭಂಡಾರಿ |
| 3. | ಉತ್ತರಿಸುವ ದಿನಾಂಕ: | 15.02.2024 |
| 4. | ಉತ್ತರಿಸುವ ಸಚಿವರು | ಮುಖ್ಯಮಂತ್ರಿಯವರು |

| ಪ್ರಶ್ನೆ | ಉತ್ತರ |
|---|---|

| | | |
|---|---|---|
| (ಅ) | ಕರ್ನಾಟಕ ಸರ್ಕಾರದ ಅಧೀನದ ಕರ್ನಾಟಕ ಭವನಗಳು ಎಷ್ಟು ಇವು ದೇಶದ ಯಾವ ರಾಜ್ಯಗಳಲ್ಲಿ ಇವೆ<br>ದೇಶದ ರಾಜ್ಯಗಳಲ್ಲಿ ಇರುವ ಕರ್ನಾಟಕ ಭವನ ಹಾಗೂ ಕರ್ನಾಟಕದ ಹೊರಗಿನ ಪ್ರವಾಸಿ / ಧಾರ್ಮಿಕ ಕೇಂದ್ರದಲ್ಲಿರುವ ಸರ್ಕಾರಿ ವಿಶ್ರಾಂತಿ ಗೃಹಗಳ ಸಹಿತ ಎಲ್ಲಾ ವಿವರ ನೀಡುವುದು | ನವದೆಹಲಿಯಲ್ಲಿ ಕರ್ನಾಟಕ ಸರ್ಕಾರದ ಅಧೀನದ ಒಟ್ಟು ಮೂರು ಕರ್ನಾಟಕ ಭವನಗಳು ಇರುತ್ತವೆ.<br><br>ಅನ್ವಯಿಸುವುದಿಲ್ಲ |
| (ಆ) | ಈ ಕರ್ನಾಟಕ ಭವನಗಳಲ್ಲಿ ಇರುವ ಕೊಠಡಿಗಳ ಸಂಖ್ಯೆಯೆಷ್ಟು<br>ಕರ್ನಾಟಕ ಭವನದ ಕೊಠಡಿಗಳನ್ನು ಗಣ್ಯರಿಗೆ ಹಾಗೂ ಇತರರಿಗೆ ವಿತರಿಸುವಾಗ ಹಾಗೂ ಕಾಯ್ದಿರಿಸುವಾಗ ಪಾಲಿಸಬೇಕಾದ ನಿಯಮಗಳು ಯಾವುವು ಅವುಗಳನ್ನು ಪಾಲಿಸಲಾಗುತ್ತಿದೆಯೇ ವರ್ಗವಾರು ವಿವರ ನೀಡುವುದು | ನವದೆಹಲಿಯ ಕರ್ನಾಟಕ ಭವನಗಳಲ್ಲಿ ಇರುವ ಕೊಠಡಿಗಳ ಸಂಖ್ಯೆಯ ವಿವರಗಳು<br>ಅನೆಕ್ಸ್ ಕಟ್ಟಡ (ಭೀಮಾ): 10+14 10 Suites out of which one each designated for Hon'ble Governor and Hon'ble CM - 14 Family Bed Rooms<br>ಕರ್ನಾಟಕ ಭವನ-2 (ಶರಾವತಿ): 36<br>ಕರ್ನಾಟಕ ಭವನ-3: 34<br>ಕರ್ನಾಟಕ ಭವನದ ಕೊಠಡಿಗಳನ್ನು ಗಣ್ಯರಿಗೆ ಹಾಗೂ ಇತರರಿಗೆ ವಿತರಿಸುವಾಗ ಹಾಗೂ ಕಾಯ್ದಿರಿಸುವಾಗ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 37 ಹೆಚ್ಎಂಬಿ 2018, ದಿನಾಂಕ:28.03.2019ರಲ್ಲಿ ಸೂಚಿಸಿರುವ ನಿಯಮಗಳನ್ನು ಪಾಲಿಸಲಾಗುತ್ತಿದೆ.<br>(ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ) |
| (ಇ) | ನವದೆಹಲಿ ಕರ್ನಾಟಕ ಭವನ-1,2 ಹಾಗೂ 3ನ್ನು ಯಾರ್ಯಾರಿಗೆ ನೀಡಲು ಅವಕಾಶವಿದೆ<br>ಹಾಗೂ ಪ್ರಸ್ತುತ ಈ ಕರ್ನಾಟಕ ಭವನ-1,2 ಹಾಗೂ 3ನ್ನು ಯಾರಿಗೆ | ಕರ್ನಾಟಕ ಭವನ-1ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 37 ಹೆಚ್ಎಂಬಿ 2018, ದಿನಾಂಕ:28.03.2019ರಲ್ಲಿ ಸೂಚಿಸಿರುವಂತೆ ಕೊಠಡಿಗಳನ್ನು ನೀಡಲಾಗುತ್ತಿದೆ. (ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ). |

| | | |
|---|---|---|
| | ನೀಡಲಾಗುತ್ತಿದೆ; ಅಲ್ಲಿಯ ಶಿಷ್ಟಾಚಾರ ಪದ್ಧತಿಗಳೇನು (ವಿವರ ನೀಡುವುದು) | ಕರ್ನಾಟಕ ಭವನ-2 ಮತ್ತು ಕರ್ನಾಟಕ ಭವನ-3ರಲ್ಲಿ ಸಂಸದರು, ವಿಧಾನ ಸಭಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸಂಸದರು, ಶಾಸಕರು ಮತ್ತು ಪರಿಷತ್ ಸದಸ್ಯರು, ಸರ್ಕಾರಿ ಅಧಿಕಾರಿ, ನಿವೃತ್ತ ಅಧಿಕಾರಿಗಳು ಹಾಗೂ ಸಚಿವರುಗಳು ಶಾಸಕರುಗಳು ನ್ಯಾಯಾಧಿಶರುಗಳು ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನ ಅನ್ವಯ ಕೊಠಡಿಗಳ ಲಭ್ಯತೆಯ ಅನುಸಾರ ಕೊಠಡಿಗಳನ್ನು ನೀಡಲಾಗುವುದು. |
| (ಈ) | ದೆಹಲಿಯ ಕರ್ನಾಟಕ ಭವನ-1ರಲ್ಲಿ ಹಾಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಹಾಗೂ ನಿವೃತ್ತ ಐ.ಎ.ಎಸ್ / ಕೆ.ಎ.ಎಸ್ ಅದಿಕಾರಿಗಳಿಗೆ ನೀಡಲು ಅವಕಾಶವಿದೇಯೇ<br>ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಭವನದ ಕೊಠಡಿಗಳನ್ನು ಪಡೆದುಕೊಂಡವರ ವಿವರ ಒದಗಿಸುವುದು | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 37 ಹೆಚ್‌ಎಂಬಿ 2018, ದಿನಾಂಕ:28.03.2019ರ ಕ್ರಮ ಸಂಖ್ಯೆ:01 ಮತ್ತು 02ರ ಅನುಸಾರ ಕರ್ನಾಟಕ ಭವನ-1ರಲ್ಲಿ ಕೊಠಡಿಗಳನ್ನು ಕಾಯ್ದಿರಿಸಲಾಗುತ್ತದೆ (ಸರ್ಕಾರದ ಆದೇಶ ಪ್ರತಿಯನ್ನು ಲಗತ್ತಿಸಿದೆ)<br>ಜನವರಿ-2021 ರಿಂದ ಡಿಸೆಂಬರ್-2023ರವರೆಗೆ ಕೊಠಡಿ ಪಡೆದುಕೊಂಡವರ ಸಂಖ್ಯೆ<br>**ಅನೆಕ್ಸ್ ಕಟ್ಟಡ (ಭೀಮಾ)** 2494 — **ಕರ್ನಾಟಕ ಭವನ-2 (ಶರಾವತಿ)** 9116 — **ಕರ್ನಾಟಕ ಭವನ-3** 1782<br>(ಸಂಪೂರ್ಣ ವಿವರಗಳನ್ನು ಅನುಬಂಧ-1 ರಲ್ಲಿರಿಸಿದೆ) |
| (ಉ) | ಸರ್ಕಾರದ ವತಿಯಿಂದ ದೇಶದ ವಿವಿಧ ರಾಜ್ಯಗಳ ಭಾಗಗಳಲ್ಲಿ ಕರ್ನಾಟಕ ಭವನ ನಿರ್ಮಿಸುವ ಉದ್ದೇಶ ವಿದೆಯೇ ಹಾಗಿದ್ದಲ್ಲಿ, ವಿವರ ನೀಡುವುದು | ಆ ರೀತಿಯ ಯಾವುದೇ ಉದ್ದೇಶ ಪ್ರಸ್ತುತ ಸರ್ಕಾರಕ್ಕೆ ಇರುವುದಿಲ್ಲ. |
| (ಊ) | ಕರ್ನಾಟಕ ಭವನಗಳ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತಿದೆ<br>ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಕರ್ನಾಟಕ ಭವನಗಳ ನಿರ್ವಹಣೆಗೆ ಮಾಡಿದ ವೆಚ್ಚವೆಷ್ಟು<br>ಈ ನಿರ್ವಹಣೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆಯೇ (ವಿವರ ನೀಡುವುದು) | ಕರ್ನಾಟಕ ಭವನ-1 ಮತ್ತು 2ರ ನಿರ್ವಹಣೆಗಾಗಿ ವಿವಿಧ ಏಜೆನ್ಸಿ ಮೂಲಕ ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳಲಾಗಿದೆ.<br><br>ಹಾಗೂ ಕರ್ನಾಟಕ ಭವನ-3ರ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ಇವರಿಗೆ ನೀಡಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಕರ್ನಾಟಕ ಭವನಗಳ ನಿರ್ವಹಣೆಗೆ ಮಾಡಿದ ವೆಚ್ಚ.<br>2020-21 2021-22<br>2022-23<br>Rs.8,17,69,492.00 Rs.8,07,97,928.00<br>Rs.7,92,21,057.00<br><br>ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ಕಳೆದ ಮೂರು ವರ್ಷದಲ್ಲಿ |

| | | |
|---|---|---|
| | | ಆಗಿರುವ ವೆಚ್ಚ<br>2020-21 2021-22<br>2022-23<br>Rs.2,14,61,696.00 Rs.2,18,50,444.00<br>Rs.2,58,50,519.00<br><br>ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಇವರಿಗೆ ಪಾವತಿಸಿರುವ ಮೊತ್ತ<br>2020-21 2021-22<br>2022-23<br>Rs.2,14,61,696.00 Rs.2,18,50,444.00<br>Rs.2,58,50,519.00<br>(ಪ್ರತಿ ತ್ರೈಮಾಸಿಕದ ಆರಂಭದಲ್ಲಿ ಅತಿಥಿ ಗೃಹದ ಸುಗಮ ಕಾರ್ಯಾಚರಣೆಯನ್ನು ಖಚಿತ ಪಡಿಸಿಕೊಳ್ಳಲು ಒಂದು ವರ್ಷದ ಅಂದಾಜು ಒಟ್ಟು ವೆಚ್ಚದ ನಾಲ್ಕನೇ ಒಂದು ಭಾಗ, ಅಂದರೆ ರೂ.2.85 ಕೋಟಿ ಅಥವಾ ತಾತ್ಕಾಲಿಕ ವಾರ್ಷಿಕ ಅಂದಾಜು ವೆಚ್ಚವನ್ನು KSTDCಗೆ ಒಟ್ಟು ಮೊತ್ತದ ಮುಂಗಡವಾಗಿ ಬಿಡುಗಡೆ ಮಾಡಲಾಗುತ್ತದೆ). |

DPAR/13/HMB/2024

(ಸಿದ್ದರಾಮಯ್ಯ)

ಮುಖ್ಯ ಮಂತ್ರಿ